# ಮಕ್ಕಳ ಮೆಚ್ಚುಗೆಯೆ ನನಗೆ ಪ್ರಶಸ್ತಿ

## ನಿರ್ಮಲಾ ಸುರತ್ಕಲ್ ಸಂದರ್ಶನ

**1** ಮಕ್ಕಳ ಸಾಹಿತ್ಯವನ್ನು ನಿಮ್ಮ ಬರವಣಿಗೆಯ ಪ್ರಮುಖ ಪ್ರಕಾರವನ್ನಾಗಿ ಆರಿಸಿಕೊಂಡಿರುವುದು ಏಕೆ?

**2** ಮಕ್ಕಳಿಗಾಗಿ ಬರೆಯುತ್ತಿರುವುದಕ್ಕೆ ನಿರ್ದಿಷ್ಟ ಕಾರಣಗಳೇನಾದರೂ ಇವೆಯೆ?

**3** ಕಥೆ–ಕವಿತೆ ಹಚ್ಚಿಕೊಂಡ ಮಕ್ಕಳ ಸಂಖ್ಯೆ ಕಡಿಮೆಯಾಗುತ್ತಿದೆ ಅನ್ನಿಸಿದೆಯೆ? ಹೌದು ಎನ್ನುವುದಾದರೆ, ನಿರುತ್ಸಾಹದ ಸನ್ನಿವೇಶದಲ್ಲೂ ಬರೆಯುವ ಉತ್ಸಾಹವನ್ನು ನಿಮ್ಮಲ್ಲಿ ಉಳಿಸಿರುವ ಅಂಶ ಯಾವುದು?

**4** ಮಕ್ಕಳಿಗಾಗಿ ಬರೆಯುವವರು ಮುಖ್ಯವಾಗಿ ಯಾವ ಅಂಶಗಳನ್ನು ಗಮನದಲ್ಲಿ ಇಟ್ಟುಕೊಂಡಿರಬೇಕು? ಹಾಗೆ ನಿಮ್ಮ ಮನಸ್ಸಿನಲ್ಲಿರುವುದು ಏನು?

**5** ಮಕ್ಕಳಿಗೆ ಬೇಕಾದುದು ಏನು? ಬರಹಗಾರ ಅದನ್ನು ಅರಿಯುವ ಕ್ರಮ ಹೇಗೆ?

**6** ಮಕ್ಕಳಿಗಾಗಿ ಬರೆಯುವುದರ ಬದಲು ದೊಡ್ಡವರಿಗಾಗಿ ಬರೆದಿದ್ದರೆ ಚೆನ್ನಾಗಿತ್ತು ಎಂದು ಯಾವಾಗಲಾದರೂ ಅನ್ನಿಸಿದೆಯೆ?

**7** ನಿಮ್ಮ ಬರವಣಿಗೆಗೆ ಸಂಬಂಧಿಸಿದಂತೆ ಈವರೆಗೆ ದೊರೆತಿರುವ ಅತ್ಯುತ್ತಮ ಪ್ರಶಂಸೆ ಯಾವುದು?

**1**

ನನ್ನ ಕಾರ್ಯಕ್ಷೇತ್ರ ಮಕ್ಕಳ ಒಡನಾಟದ ಜೊತೆಗೇನೇ ಇತ್ತು, ಈಗಲೂ ಇದೆ. ಬರೆದದ್ದನ್ನು ಓದಿ ಹೇಳು ಎಂದು ಪೀಡಿಸುತ್ತಿದ್ದ ಅವರು ನನ್ನ ಬರಹಗಳ ಮೊದಲು ಓದುಗರಾಗಿರುತ್ತಿದ್ದರು. ಅವರ 'ಚಲೋ ಇದೆ', 'ಬೊಂಬಾಟಾಗಿದೆ', 'ಸಕತ್ತಾಗಿದೆ', 'ಚೆನ್ನಾಗಿದೆ' ಮೆಚ್ಚುಗೆಗಳೇ ನನಗೆ ಪ್ರಶಸ್ತಿಗಳಾಗಿರುತ್ತಿದ್ದವು. ಬರೆಯುವ ಉತ್ಸಾಹವನ್ನು ಹೆಚ್ಚಿಸುತ್ತಿದ್ದವು. 'ಇವತ್ತೇನು ಬರೆದಿರಿ?' ಎನ್ನುವ ಪ್ರಶ್ನೆಗಳು ಮತ್ತಷ್ಟು ಬರೆಯಲು ಪ್ರೇರೇಪಣೆ ನೀಡುತ್ತಿದ್ದವು. ಪ್ರಥಮ ಮಕ್ಕಳ ಕವನ ಸಂಕಲನ 'ಪಾತರಗಿತ್ತಿ ಪಕ್ಕಾ'ಗೆ ಮಕ್ಕಳು ಮಾತ್ರವಲ್ಲದೆ, ಮಕ್ಕಳ ಸಾಹಿತ್ಯವನ್ನೂ ಆಸ್ವಾದಿಸುವ ಪ್ರೌಢರೂ ಮೆಚ್ಚುಗೆಯ ಮಾತುಗಳನ್ನಾಡಿದ್ದಲ್ಲದೆ, 'ಎಂದೂ ಬರವಣಿಗೆ ನಿಲ್ಲಿಸಬೇಡಿ' ಎಂದು ಕಿವಿಮಾತೂ ಹೇಳಿದ್ದರು. ಸಾಹಿತ್ಯವಲಯದಲ್ಲಿ ನಾನು ಗುರುತಿಸಿಕೊಂಡದ್ದು, ಪ್ರಶಸ್ತಿಗಳನ್ನು ಪಡೆದುಕೊಂಡದ್ದು ಈ ಕ್ಷೇತ್ರದಲ್ಲೇ.